


### ಉಪಯುಕ್ತ ಮಾಹಿತಿ

ಜುಲೈ 5ರ ಸುಧಾ ಮುಖಪುಟ ಲೇಖನ 'ಹೊರಾಂಗಣ ವಿನ್ಯಾಸ' (ಸುಧಾ ಹೆಗಡೆ) ಲೇಖನ ಮಾಹಿತಿ ಪೂರ್ಣವಾಗಿದೆ.

ಶ್ರುತಿ ಕೆ. ಮಠದ, ಚಿತ್ರದುರ್ಗ/ ಕಾಳೀಹುಂಡಿ ಶಿವಕುಮಾರ್, ಮೈಸೂರು

### ಕಾಯುವಿಕೆಗೆ ಸಿಕ್ಕ ಮನ್ನಣೆ

ಅತ್ಯಂತ ಸಂಯಮದಿಂದ ಕ್ಯಾಮೆರಾದೊಂದಿಗೆ ಕಾದು ಕುಳಿತಾಗಲಷ್ಟೇ ಮಂಜುನಾಥ ಅವರು 'ಬಿಸಿಲು ಕುದುರೆ'ಯ ಅಪೂರ್ವ ಚಿತ್ರಗಳನ್ನು ತೆಗೆಯಲು ಸಾಧ್ಯವಾಗಿದೆ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಭ್ರಷ್ಟ ಅಧಿಕಾರಿಗಳಿಗೆ ಸ್ಫೂರ್ತಿ!

'ಬಿಸಿಲು ಕುದುರೆ' ಸರಿಯಾದ ಪದವಲ್ಲ. ಅದು ಸೂರ್ಯನ ಕುದುರೆ ಎಂದಿರಬೇಕು. ಧ್ಯಾನ ಸ್ಥಿತಿಯಲ್ಲಿ ಕುಳಿತು ಕೈಗೆ (ಕಾಲಿಗೆ!) ಸಿಕ್ಕ ಕೀಟಗಳನ್ನು ಭಕ್ಷಿಸಿ ಮತ್ತದೇ ಭಂಗಿಯಲ್ಲಿ ಕೂರುವ ಈ ಪ್ರಾಣಿ ನಮ್ಮ ಜನನಾಯಕರು ಹಾಗೂ ಭ್ರಷ್ಟ ಅಧಿಕಾರಿಗಳಿಗೆ ಸ್ಫೂರ್ತಿಯಾಗಿರಬಹುದು!

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಸೊಗಸಾದ ವಿಚಾರ

'ವಿಚಾರ ಲಹರಿ'ಯಲ್ಲಿ ಶಿಕಾಕು ಪ್ರಾಣಿ ಪ್ರೀತಿಯ ಬಗ್ಗೆ ಸೊಗಸಾಗಿ ಬರೆದಿದ್ದಾರೆ.

-ದಾಕ್ಷಾಯಣಿ ಎಸ್.ಪಿ., ಶಿವಮೊಗ್ಗ

### ಸಕಾಲಿಕ ಆಯ್ಕೆ!

ರಾಷ್ಟ್ರಪತಿ ಚುನಾವಣೆ ಸಮೀಪಿಸಿದ ಸಂದರ್ಭಕ್ಕೆ ಪ್ರಕಟಿಸಿದ ಧರ್ಮೇಂದ್ರರ 'ಹೇಗೆ ಆಯ್ಕೆ ಏನು ಅಧಿಕಾರ' ಲೇಖನ ಸಕಾಲಿಕವಾಗಿತ್ತು.

-ಪಿ.ಎನ್.ಶ್ರೀವತ್ಸ, ಬೆಂಗಳೂರು/ ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

### ರಂಜಿಸಿದ ರಂಜಿನಿ

'ರಂಜನೆಗೆ ರಂಜಿನಿ ಕಲಾ ಕೇಂದ್ರ' ಉಮಾ ಅನಂತ್ ಲೇಖನ-ಚಿತ್ರಗಳು ರಂಜಿಸಿದವು.

-ತರಂಗಿಣಿ, ತುಮಕೂರು

### ಮನ ತಣಿಸಿತು

ಅಭಿಷೇಕ ಡಿ. ಪುಂಡಿತ್ತೂರರ ಒತ್ತಿನೆಣೆಯ ಕಡಲು ಚಿತ್ರ ಬರಹ ಮನ ತಣಿಸಿತು.

-ಎಸ್.ನಿತ್ಯ, ಮೂಡಬಿದರೆ

### ಗತ ದಿನಗಳ ಮೆಲುಕು

ಹಿಂದಿ ಚಿತ್ರರಂಗದ ಮೇರುನಟ ರಾಜೇಶ್ ಖನ್ನಾ ಬಗ್ಗೆ 'ಹನಿ' ಬರಹ ಗತದಿನಗಳನ್ನು ಮೆಲುಕು ಹಾಕುವಂತೆ ಮಾಡಿದೆ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಆಘಾತ ತಂದ ಕಥೆ

ಎನ್. ಶೈಲಜಾ ಹಾಸನ ಅವರ 'ನಿಗೂಢ' ಪತ್ತೇದಾರಿ ಕಥೆ ಮನೋಜ್ಞವಾಗಿತ್ತು. ತಂದೆಯೇ ಮಗಳನ್ನು ಕೊಲೆ ಮಾಡುವ ನೀಚಕೃತ್ಯದಿಂದ ಆಘಾತವನ್ನೇ ಉಂಟು ಮಾಡಿತು.

ಎನ್.ಮಂಗಳಾ, ಬೆಂಗಳೂರು/ ಎಸ್.ಗಿರಿಜ, ತುಮಕೂರು

### ಸ್ಪಷ್ಟ ಸಂದೇಶದ ಕಥೆ

ಜೂನ್ 28ರ ಸಂಚಿಕೆಯಲ್ಲಿ ತಂಬ್ರಹಳ್ಳಿ ರಾಮನಮಲಿ ಅವರ 'ಕೈ ಹಿಡಿದು ನಡೆಸೆನ್ನನು' ಕಥೆ ಪ್ರಸ್ತುತ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಮತೀಯ ಗಲಭೆಗಳನ್ನು ಪ್ರಚೋದಿಸುವವರಿಗೆ ಒಂದು ಸ್ಪಷ್ಟ ಸಂದೇಶ ಸಾರಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಬಿ.ಎಸ್.ಮುಳ್ಳೂರ, ಹಲಗತ್ತಿ

### ಕಥಾ ಸಂಕಲನ ಆಹ್ವಾನ

ಬೆಳಗಾವಿಯ ಬಿ.ಎ. ಸನದಿ ಸಾಂಸ್ಕೃತಿಕ ಪ್ರತಿಷ್ಠಾನವು ಜನ್ನಾ ಸನದಿ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿಗೆ 2011ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಥಾ ಸಂಕಲನಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ರೂ. 5,000 ನಗದು ಗೌರವ ಸಂಮಾನ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. 35 ವರ್ಷದ ಒಳಗಿನ ಆಸಕ್ತ ಕತೆಗಾರರು ತಮ್ಮ ಕಥಾ ಸಂಕಲನದ ಮೂರು ಪ್ರತಿಗಳನ್ನು ವಯಸ್ಸಿನ ದಾಖಲೆ ವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಡಿ.ಬಿ. ಪಾಟೀಲ, ಕಸ್ತೂರಿ, 376, ಸೆಕ್ಟರ್-3, ಶಿವಬಸವ ನಗರ, ಬೆಳಗಾವಿ-10 ಈ ವಿಳಾಸಕ್ಕೆ ಜುಲೈ 31 ರೊಳಗೆ ತಲುಪುವಂತೆ ಕಳಿಸಲು ಕೋರಲಾಗಿದೆ.

### ಮುದ್ದಣ್ಣ ಕಾವ್ಯ ಪ್ರಶಸ್ತಿ

ಕಾಂತಾವರ ಕನ್ನಡ ಸಂಘವು 2012ನೇ ಸಾಲಿನ ಮುದ್ದಣ್ಣ ಕಾವ್ಯ ಪ್ರಶಸ್ತಿಗಾಗಿ ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹಗಳ ಹಸ್ತಪ್ರತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿ ತಲಾ ಹತ್ತು ಸಾವಿರ ರೂ. ನಗದು. ಆಸಕ್ತರು 5ರೂ. ಅಂಚೆ ಚೀಟಿ ಹಚ್ಚಿದ ಸ್ವ ವಿಳಾಸವಿರುವ ಕವರನ್ನು ಕಳುಹಿಸಿ ಸ್ಪರ್ಧೆಯ ವಿವರಗಳನ್ನು- ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ, ಅಂಚೆ: ಕಾಂತಾವರ-574129, ಉಡುಪಿ ಜಿಲ್ಲೆ ಇವರಿಂದ ಜುಲೈ 30ರ ಒಳಗಾಗಿ ಪಡೆಯಬಹುದು. ಹಸ್ತಪ್ರತಿ ಸ್ವೀಕಾರದ ಕೊನೆಯ ದಿನ 15 ಆಗಸ್ಟ್. ಹೆಚ್ಚಿನ ಮಾಹಿತಿಗೆ: 9900701666, 9164038350 ಸಂಪರ್ಕಿಸಿ.

## ನಕ್ಕುಬಿಡಿ




### ಹೊಸ ಕಾರು

ಮಂಟಾ: ನಿಮ್ಮ ಹೊಸ ಕಾರಿನ ಹೆಸರೇನು?

ಬಂಟಾ: ಗೊತ್ತಿಲ್ಲ, ಮರೆತು ಹೋಗಿದೆ. ಆದರೆ ಅದು 'ಟೀ' ಇಂದ ಸ್ಟಾರ್ಟ್ ಆಗುತ್ತೆ.

ಮಂಟಾ: ಹೌದಾ! ನೀವು ತುಂಬಾ ಲಕ್ಕಿ. ನನ್ ಕಾರು ಪೆಟ್ರೋಲ್ ಹಾಕಿದ್ರೆ ಮಾತ್ರ ಸ್ಟಾರ್ಟ್ ಆಗುತ್ತೆ.

★★★

### ಹೆಂಡತಿಯ ಕಾಯಿಲೆ

ಬಂಟಾನ ಹೆಂಡತಿಯನ್ನು ಡಾಕ್ಟರ್ ಪರೀಕ್ಷೆ ಮಾಡಿ ತಲೆಯಲ್ಲಾಡಿಸಿದರು.

ಡಾಕ್ಟರ್: ಏನು ಆಗಿಲ್ಲವಲ್ಲಯ್ಯ.. ಚೆನ್ನಾಗಿಯೇ ಇದ್ದಾರೆ.

ಬಂಟಾ: ಇಲ್ಲಾ ಡಾಕ್ಟ್ರೇ, ನೀವು ಸರಿಯಾಗಿ ನೋಡಲಿಲ್ಲ. ಮಾತನಾಡುವಾಗ ಆಗಾಗ್ಗೆ ನಿಲ್ಲಿಸಿ ಬಿಡುತ್ತಾಳಲ್ಲಾ.. ಏಕೆ?

ಡಾಕ್ಟರ್: ಉಸಿರಾಡಲಿಕ್ಕೆ!

ಸಂಗ್ರಹ: ಎನ್.ಎಸ್. ಆನಂದ್, ಬೆಂಗಳೂರು

### ತುಪ್ಪ ನೀಡಿ

ಭಿಕ್ಷುಕ: ಅಮ್ಮಾ ತಾಯೀ... ಸ್ವಲ್ಪ ತುಪ್ಪ ನೀಡಿ...

ರಂಗಮ್ಮ: ಏನಪ್ಪಾ ಇದು ನಿನ್ನ ಹೊಸ ವರಸೆ! ನಿನಗೆ ತುಪ್ಪ ಏಕೆ ಬೇಕು?

ಭಿಕ್ಷುಕ: ಪಕ್ಕದ ಮನೆಯವರು ಇಂದು ಹೋಳಿಗೆ ನೀಡಿದ್ದಾರೆ, ಅದರ ಮೇಲೆ ಹಚ್ಚಿಕೊಳ್ಳಲು ತುಪ್ಪ ಬೇಕಮ್ಮ.

★★★



### ಪ್ರೇಮವಿವಾಹ

ಹುಡುಗ: ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ಮದುವೆ ಆಗೋಣವಾ..

ಹುಡುಗಿ: ಆದರೆ ನೀನು ನನಗಿಂತ ಒಂದು ವರ್ಷ ಚಿಕ್ಕವನು!

ಹುಡುಗ: ಪರವಾಗಿಲ್ಲ, ನಾವು ಒಂದು ವರ್ಷ ಬಿಟ್ಟು ಆಮೇಲೆ ಮದುವೆ ಆಗೋಣ.

ಸಂಗ್ರಹ: ಲಕ್ಷ್ಮೀ ಎಸ್. ಮೆಳ್ಳಿಗೇರಿ, ಸಾಂಗಲಿ